


## ಮ್ಯಾನ್ಯುಯೆಲ್ (ಐಒಎಸ್)

ಐಫೋನ್‌ನ ಈ ಆ್ಯಪ್‌ನಲ್ಲಿ ಕ್ಯಾಮೆರಾ ಸೆಟಿಂಗ್‌ನಲ್ಲಿ ಹೆಚ್ಚಿನ ಆಯ್ಕೆಗಳಿವೆ. ಮೊಬೈಲ್‌ನಲ್ಲಿ ಫೋಟೊ ತೆಗೆಯುವಾಗ ಶಟರ್ ಸ್ಪೀಡ್, ಎಕ್ಸ್‌ಪೋಸರ್, ಫೋಕಸ್ ಮೊದಲಾದವುಗಳನ್ನು ಕರಾರುವಾಕ್ಕಾಗಿ ನಿಯಂತ್ರಿಸಬಹುದು. ಇದು ಫೋನ್ ಜೊತೆಗೇ ಇರುವ ಆ್ಯಪ್ ಆಗಿದ್ದು, ಆರಂಭದ ಸೆಟಪ್‌ನ ಅಗತ್ಯವಿಲ್ಲ. ವಿವರಣೆಗಳಿದ್ದು, ಶಟರ್ ಸ್ಪೀಡ್, ಆಟೋಮ್ಯಾಟಿಕ್ ಮೋಡ್ ಮೊದಲಾದವುಗಳನ್ನು ಹೇಗೆ ಹೊಂದಿಸಿಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳಬಹುದು. ಸ್ಕ್ರೀನ್‌ನ ಹೆಚ್ಚಿನ ಭಾಗ ವ್ಯೂಫೈಂಡರ್ ಆಗಿದ್ದು, ವಿಡಿಯೋ ರೆಕಾರ್ಡಿಂಗ್, ಎಚ್‌ಡಿಆರ್ ಫೋಟೊ ಮೊದಲಾದವುಗಳ ಬೆಂಬಲವಿಲ್ಲ.

## ಡಬ್ಲ್ಯುಪಿಎಸ್ ಆಫೀಸ್

ಇದು ಐಒಎಸ್/ ಆ್ಯಂಡ್ರಾಯ್ಡ್‌ನ ಆಲ್–ಇನ್–ಒನ್ ಆಫೀಸ್ ಆ್ಯಪ್ ಆಗಿದ್ದು, ವೇಗವಾಗಿ ಕೆಲಸ ಮಾಡಬಹುದು. ಎಡಿಟಿಂಗ್ ಉಪಕರಣಗಳು ಉಪಯುಕ್ತವಾಗಿದ್ದು, ಲೇಔಟ್ ಕೂಡಾ ಚೆನ್ನಾಗಿದೆ. ಡಾಕ್ಯಮೆಂಟ್ ಸ್ಪ್ರೆಡ್‌ಶೀಟ್ ಎಡಿಟ್ ಮಾಡಲು ಮತ್ತು ಇತರ ಪ್ರಸೆಂಟೇಶನ್‌ಗೆ ಇದು ಅನುಕೂಲಕರವಾದ ಆ್ಯಪ್. ಇದು ಉಚಿತ ಆ್ಯಪ್ ಆಗಿದ್ದು, ಯಾವುದೇ ಖಾತೆಗೆ ಲಾಗಿನ್ ಆಗುವ ಅವಶ್ಯಕತೆ ಇಲ್ಲ. ನೇರವಾಗಿ ಡೌನ್‌ಲೋಡ್ ಮಾಡಿ ಬಳಸಲು ಶುರು ಮಾಡಬಹುದು. ಡ್ರಾಪ್‌ಬಾಕ್ಸ್ ಜೊತೆಗೂ ಇದಕ್ಕೆ ಸಂಯೋಜನೆ ನೀಡಲಾಗಿದೆ. ವಿನ್ಯಾಸ ಮೈಕ್ರೋಸಾಫ್ಟ್ ಆಫೀಸ್ ತರಹವಿದ್ದು, ಮೇಲ್ಗಡೆ ಟೂಲ್‌ಬಾರ್ ಇದ್ದು, ಇದರಲ್ಲಿ ಎಲ್ಲಾ ಎಡಿಟಿಂಗ್ ಆಯ್ಕೆಗಳಿವೆ. ಫೈಲ್, ಇನ್‌ಸರ್ಟ್ ಹಾಗೂ ವ್ಯೂ ಮೊದಲಾದ ವಿವಿಧ ಟೂಲ್‌ಗಳಿಗೆ ಟ್ಯಾಬ್‌ಗಳಿವೆ. ಇದು ಮೈಕ್ರೋಸಾಫ್ಟ್, ಗೂಗ್ಲ್ ಡಾಕ್ಸ್‌ನ ಡೂಸಿಎಕ್ಸ್, ಜಿಶೀಟ್ ಮೊದಲಾದ ಫೈಲ್‌ಗಳಿಗೆ ಹೆಚ್ಚು ಅನುಕೂಲಕರ. ಬಾಕ್ಸ್, ಗೂಗ್ಲ್ ಡ್ರೈವ್, ಒನ್‌ಡ್ರೈವ್, ಎವರ್‌ನೋಟ್ ಮೊದಲಾದ ಕ್ಲೌಡ್ ಸ್ಟೋರೇಜ್ ಖಾತೆಗಳಿಗೆ ಸಂಪರ್ಕ ಸಾಧಿಸಬಹುದು.




## ರೀಟೆಕ್ಸ್ಟ್

ನೀವು ಈಗಾಗಲೇ ಕಳಿಸಿರುವ ಸಂದೇಶಗಳನ್ನು ಸರಿ ಮಾಡಬಹುದು ಅಥವಾ ಅಳಿಸಿ ಹಾಕಬಹುದು. ಇದು 'ಎಂಡ್–ಟು–ಎಂಡ್ ಎನ್‌ಕ್ರಿಪ್ಶನ್' ಅಂಶ ಹೊಂದಿದೆ. ಹೀಗಾಗಿ ನಿಮ್ಮ ಸಂದೇಶಗಳು ಸುರಕ್ಷಿತವಾಗಿರುತ್ತವೆ. ಟೆಕ್ಸ್ಟ್ ಅಲ್ಲದೇ ಇಮೋಜಿ, ಫೋಟೊ, ವಿಡಿಯೋ– ಆಡಿಯೋ ಕ್ಲಿಪ್‌ಗಳು ಮತ್ತು ನೀವಿರುವ ಸ್ಥಳದ ವಿವರವನ್ನೂ ಕಳಿಸಬಹುದು. ಇದಕ್ಕೆ ಶುಲ್ಕವಿದ್ದು, ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ನಂತರ ನೋಂದಣಿ ಮಾಡಿಕೊಳ್ಳಬೇಕು. ನೀವು ಸಂದೇಶ ಕಳಿಸಿದ ನಂತರ ಚ್ಯಾಟ್‌ನಲ್ಲಿ ಅದು ಕಾಣಿಸಿಕೊಳ್ಳುತ್ತದೆ. ನೀವು ಎಡಗಡೆ ಸ್ವೈಪ್ ಮಾಡಿದಾಗ ಬಟನ್‌ಗಳು ಕಾಣಿಸುತ್ತವೆ. ಅವುಗಳ ಮೂಲಕ ಎಡಿಟ್ ಮಾಡಬಹುದು ಅಥವಾ ಅಳಿಸಿ ಹಾಕಬಹುದು. ಇತರರಿಂದ ಸಂದೇಶ ಬಂದಾಗ ಅದು ಅರ್ಥವಾಗದಿದ್ದರೆ ಬಟನ್ ಮೇಲೆ ಕುಟ್ಟಿ ಪ್ರಶ್ನಾರ್ಥಕ ಚಿಹ್ನೆ ಕಳಿಸಬಹುದು.







## ಫ್ಯೂಸ್

ಈ ಆ್ಯಪ್ ಬಳಸಿ ಫೋಟೊ, ವಿಡಿಯೋ ಹಾಗೂ ಜಿಫ್‌ಗಳನ್ನು ಒಳಗೊಂಡ ಫೋಟೊ ಸೆರೆ ಹಿಡಿಯಬಹುದು. ಐಒಎಸ್/ ಆ್ಯಂಡ್ರಾಯ್ಡ್‌ನ ಈ ಆ್ಯಪ್ ಒಳಗೊಂಡ ಫೋನನ್ನು ಕೈಯಲ್ಲಿ ಹಿಡಿದು ತಿರುಗಿಸಿದರೆ ಫೋಟೋವನ್ನು ಕೂಡಾ ತಿರುಗಿಸಬಹುದು ಹಾಗೂ ಓರೆಕೋರೆ ಮಾಡಬಹುದು. ಅಂದರೆ ನಿಮಗೆ ಯಾವ ವಸ್ತುವಿನ ಅಥವಾ ವ್ಯಕ್ತಿಯ ಚಿತ್ರ ತೆಗೆಯಬೇಕೋ ಅದನ್ನು ತೆಗೆದ ನಂತರ ಸ್ಕ್ರೀನ್ ಒತ್ತಿ ಹಿಡಿದು ಒಂದೇ ದಿಕ್ಕಿನಲ್ಲಿ ಫೋನನ್ನು ತಿರುಗಿಸಬಹುದು. ನಿಮಗೆ ಬಾಣದ ಗುರುತೊಂದು ಮಾರ್ಗದರ್ಶನ ಮಾಡುತ್ತದೆ. 360 ಡಿಗ್ರಿಯಲ್ಲಿ ಒಂದೇ ದಿಕ್ಕಿನಲ್ಲಿ ತಿರುಗಿಸುತ್ತ ಫೋಟೋ ತೆಗೆಯಬಹುದು. ಗರಿಷ್ಠ ಮಟ್ಟ ಮುಟ್ಟಿದ ನಂತರ ಅದಷ್ಟಕ್ಕೇ ಸ್ಥಗಿತಗೊಳ್ಳುತ್ತದೆ. ಒಂದೇ ದಿಕ್ಕು ಎಂದರೆ ಮೇಲೆ– ಕೆಳಗೆ ಅಥವಾ ಎಡಕ್ಕೆ– ಬಲಕ್ಕೆ ತಿರುಗಿಸಬಹುದು.

■ ಎಸ್. ತುಂಬೆ